ರಾಷ್ಟ್ರ ಜಾಗೃತಿಯ ದೈನಿಕ

# ಹೊಸ ದಿಗಂತ

## Saturday 28th February 2020, Sub Edition Page No.1

### RVCE 8th Mile Forum for MP Tejaswi Surya Abhimatha



29 Feb 2020

ಸಂಸದ ತೇಜಸ್ವಿ ಸೂರ್ಯ ಅಭಿಮತ

## ಸಾಮರ್ಥ್ಯ ಅನ್ವೇಷಣೆಗೆ 8ನೇ ಮೈಲ್ ವೇದಿಕೆ



**ಬೆಂಗಳೂರು:** ಯುವಕರ ಸಾಮರ್ಥ್ಯ ಅನ್ವೇಷಿಸಲು 8ನೇ ಮೈಲ್ ಕಾರ್ಯಕ್ರಮ ಅದ್ಭುತವಾದ ವೇದಿಕೆ ಎಂದು ಸಂಸದ ತೇಜಸ್ವಿ ಸೂರ್ಯ ಹೇಳಿದರು.

ಆರ್‌ವಿ ಇಂಜಿನಿಯರಿಂಗ್ ಕಾಲೇಜ್ ಆಯೋಜಿಸಿದ್ದ 8ನೇ ಮೈಲ್ ಫ್ಲ್ಯಾಗ್‌ಶಿಪ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, 8ನೇ ಮೈಲ್ ಕಾರ್ಯಕ್ರಮದ ಬಗ್ಗೆ ಎಲ್ಲರಲ್ಲೂ ನಿರೀಕ್ಷೆ ಇದ್ದೇ ಇರುತ್ತದೆ. ಏಕೆಂದರೆ ಇಂತಹ ಕಾರ್ಯಕ್ರಮದಿಂದ ಯುವಕರ ಸಾಮರ್ಥ್ಯಗಳನ್ನು ಅನ್ವೇಷಿಸಲು ಉತ್ತಮ ವಾದ ವೇದಿಕೆಯಾಗಿದೆ. ಮಾತ್ರವಲ್ಲದೆ ಈ ಕಾರ್ಯಕ್ರಮದ ಬಗ್ಗೆ ಎಲ್ಲರೂ ಕೂಡ ನಿರೀಕ್ಷೆ ಹೊದಿರುತ್ತಾರೆ ಎಂದರು. ಈ ಸಂದರ್ಭದಲ್ಲಿ ಡೆರ್ರಿಕ್ ಫೆಡ್ರಿಕ್ ಸರ್ವಿಸ್‌ನ ಅಧ್ಯಕ್ಷ ಡಾ.ಯಶೋದೀಪ್ ಅವರು ತಮ್ಮ ಇತಿಹಾಸ 21ನೋಟ್ಸ್ ವಾಲ್ಮೀಕಿ ರಾಮಯಣ ಕುರಿತಾದ ಪುಸ್ತಕವನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿ ಕಥೆ ಮತ್ತು ಸತ್ಯವನ್ನು ಯಾವ ರೀತಿ ಅರ್ಥ ಮಾಡಿಕೊಳ್ಳಬಹುದು ಎಂಬುದನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು. ಎರಡು ದಿನಗಳ ಕಾಲ ನಡೆಯುವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಆಸಕ್ತಿಗೆ ಅನುಗುಣವಾಗಿ ಕಾರ್ಯಾಗಾರ ನಡೆಯಲಿದೆ. ಮಾತ್ರವಲ್ಲದೆ ಸೆಲೆಬ್ರಿಟಿ ಪ್ರೋ ಶೋ, ಡಿಜೆ ನೈಟ್ಸ್, ಕೋಕ್ ಸ್ಟುಡಿಯೋ ನೈಟ್ಸ್, ಫ್ಯಾಷನ್ ಶೋ, ಬ್ಯಾಟಲ್ ಆಫ್ ದಿ ಬ್ಯಾಂಡ್, ಹ್ಯಾಕಥಾನ್ ಹಾಗೂ ಸ್ಟಾಕ್ ಮಾರ್ಕೆಟ್, ಸ್ಟ್ಯಾಂಟಪ್ ಕಾಮಿಡಿ, ಫೈಂಡಿಂಗ್ ಶೆರ್ಲಾಕ್, ಟಗ್ ಆಫ್ ವಾರ್, ಲಗೋರಿ, ಬೆಂಕಿ ಇಲ್ಲದೆ ಅಡುಗೆ ಇಂತಹ ಇನ್ನಿತರ ಮನೋರಂಜನಾ ಕಾರ್ಯಕ್ರಮ ಕೂಡ ಒಳಗೊಂಡಿದೆ.

ಕಾರ್ಯಕ್ರಮದಲ್ಲಿ ಗಾಯಕ ಸಂಜಿತ್ ಹೆಗ್ಡೆ ಹಾಗೂ ತಂಡದಿಂದ ಲೈವ್ ಕಾನ್ಸರ್ಟ್ ಕಾರ್ಯಕ್ರಮ ನಡೆಯಿತು. ರಾಷ್ಟ್ರೀಯ ಶಿಕ್ಷಣ ಸಮಿತಿ ಅಧ್ಯಕ್ಷ ಡಾ.ಎಂ.ಕೆ.ಪಾಂಡುರಂಗಶೆಟ್ಟಿ ಉಪಸ್ಥಿತರಿದ್ದರು.